ಓ.ಎಸ್.ನಂಬರ್ಃ19/2022 ಪಿಡಬ್ಲ್ಯೂಃ 1

<u>ದಿಃ24.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ</u> ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ.

**<u>ಪಾಟಿ ಸವಾಲುಃ ಪ್ರತಿವಾದಿ 1(ಎ) ಯಿಂದ 1(ಡಿ) ಪರ ವಕೀಲರಿಂದಃ</u>**

ನನಗೆ ಈ ದಾವೆಯನ್ನು ದಾಖಲಿಸುವ ಸಮಯದಿಂದ ಮೃತ ಪ್ರತಿವಾದಿ ಗೊತ್ತು. ಮೃತ ಪ್ರತಿವಾದಿಯವರ ವಾರಸುದಾರರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1(ಎ) ಯಿಂದ (ಡಿ) ಯವರು ಎಲ್ಲಿ ವಾಸಿಸುತ್ತಿದ್ದಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ಪ್ರತಿವಾದಿ ಮೃತಪಟ್ಟ ಬಗ್ಗೆ ನಮ್ಮ ವಕೀಲರು ತಿಳಿಸಿದ ಮೇರೆಗೆ ಗೊತ್ತಾಗಿರುತ್ತದೆ. ಪ್ರತಿವಾದಿ ಮೃತಪಟ್ಟ ವಿಷಯ ನಮ್ಮ ವಕೀಲರ ಮುಖಾಂತರ ನನಗೆ ತಿಳಿಸಿದ ನಂತರದಲ್ಲಿ ನಾನು ಪ್ರತಿವಾದಿಯವರ ವಾರಸುದಾರರ ಬಳಿ ಹೋಗಿ ಅವರ ಹೆಸರು ಮತ್ತು ವಿಳಾಸವನ್ನು ಕೇಳಿ ತಿಳಿದುಕೂಂಡಿರುವುದಿಲ್ಲ. ಪ್ರತಿವಾದಿಯವರು ವಾರಸುದಾರರ ಹೆಸರು ಮತ್ತು ವಿಳಾಸ ನನಗೆ ಗೊತ್ತಿದ್ದರು ಕೂಡ ನಾನು ಅವಧಿ ಮೀರಿ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸುಳ್ಳು. ನಾನು ಅರ್ಜಿಯನ್ನು ಸ್ವೀಕರಿಸಲು ಯಾವುದೇ ಸಕಾರಣವನ್ನು ತಿಳಿಸಿರುವುದಿಲ್ಲ ಎಂದರೆ ಸುಳ್ಳು.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್. ಬಿ. ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.